ಓ ಎಸ್.ನಂ. 11 /2018

ಡಿ.ಡಬ್ಲ್ಯೂ -02

**ಸಾಕ್ಷಿಯನ್ನು ದಿಃ 22.01.2026 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವೆರದ ಪಾಟೀ ಸವಾಲುಃ ವಾದಿ ಪರ ಶ್ರೀ.ಎನ್.ಎ.ವಕೀಲರಿಂದ.**

ತಿಮ್ಮಪ್ಪ ಅವರು ಬರೆದುಕೊಟ್ಟ ಹಕ್ಕು ಬಿಡುಗಡೆ ಪತ್ರವನ್ನುನಾನು ಖುದ್ದಾಗಿ ಓದಿ ತಿಳಿದುಕೊಂಡಿರುವುದಿಲ್ಲ. ನನ್ನ ತಂದೆ ನನಗೆ ಹಕ್ಕು ಬಿಡುಗಡೆ ಪತ್ರದ ಬಗ್ಗೆ ಹೇಳಿರುತ್ತಾರೆ. ಹಕ್ಕು ಬಿಡುಗಡೆ ಪತ್ರದಲ್ಲಿ ಎಷ್ಟು ಆಸ್ತಿಗಳನ್ನು ಸೇರಿಸಲಾಗಿದೆ ಅಥವಾ ನಿಮ್ಮ ತಂದೆ ನಿಮಗೆ ಹೇಳಿದ್ದರಾ ಎಂದರೆ ಸಾಕ್ಷಿ ಗೊತ್ತಿಲ್ಲವೆಂದು ಹೇಳುತ್ತಾರೆ. ವಿಭಾಗದಲ್ಲಿ ಯಾರು ಯಾರಿಗೆ ಯಾವ ಯಾವ ಆಸ್ತಿಗಳು ಬಂದಿದ್ದವು ಎಂದು ನಾನು ವಿಭಾಗ ಪತ್ರವನ್ನು ನೋಡಿ ತಿಳಿದುಕೊಂಡಿರುವುದಿಲ್ಲ. ತಿಮ್ಮಪ್ಪ ಅವರಿಗೆ ಯಾವ ದಾಖಲಾತಿಯ ಆಧಾರದ ಮೇರೆಗೆ ಇಂತಹದ್ದೆ ಆಸ್ತಿಗಳು ಬಂದಿರುತ್ತವೆಂದು ಹೇಗೆ ಹೇಳುತ್ತೀರಿ ಎಂದರೆ ಸಾಕ್ಷಿ ಅವರ ಹಂಚಿಕೊಂಡಿದ್ದರು ಎಂದು ಹೇಳುತ್ತಾರೆ.

ಕಳೆದ ಬಾರಿ ಪಾಟೀ ಸವಾಲಿನಲ್ಲಿ ವಿಭಾಗ ಆದ ಸಮಯದಲ್ಲಿ ನಾನು ಚಿಕ್ಕವನಿದ್ದೇ ಎಂದು ಹೇಳಿದ್ದು ಈ ಬಾರಿ ಭಾಗದ ಬಗ್ಗೆ ಗೊತ್ತು ಎಂದು ಹೇಳುತ್ತಿದ್ದೀರಿ ಯಾವ ಆಧಾರದ ಮೇರೆಗೆ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ನನ್ನ ತಂದೆ ನನಗೆ ಹೇಳಿರುತ್ತಾರೆಂದು ನುಡಿಯುತ್ತಾರೆ. ನನ್ನ ತಂದೆ ನನಗೆ ತಿಮ್ಮಪ್ಪ, ಮರಿಯಪ್ಪ ಮತ್ತು ಶ್ರೀನಿವಾಸ ಅವರು ಇಂತಹ ಸರ್ವೆ ನಂ ನಲ್ಲಿ ಇಷ್ಟು ಜಮೀನನ್ನು ವಿಭಾಗ ಮಾಡಿಕೊಂಡಿರುತ್ತಾರೆಂದು ನನಗೆ ಹೇಳಿರುವುದಿಲ್ಲ. ತಿಮ್ಮಪ್ಪ ಅವರ ಸಹೋದರರ ನಡುವೆ ಯಾವುದೇ ವಿಭಾಗ ಆಗಿರುವುದಿಲ್ಲ ನಾನು ಪ್ರತಿವಾದಿಗಳ ಮಾತು ಕೇಳಿ ವಿಭಾಗ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಿಮ್ಮಪ್ಪ ಅವರು ಯಾವ ವರ್ಷದಲ್ಲಿ ಖದರಾಪುರ ಗ್ರಾಮಕ್ಕೆ ಹೋಗಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ.

ಖದರಾಪುರದಲ್ಲಿ ತಿಮ್ಮಪ್ಪ ಅವರು ಪಡಿತರ ಚೀಟಿ ಮತ್ತು ಚುನಾವಣಾ ಗುರುತಿನ ಚೀಟಿ ಹೊಂದಿದ ಬಗ್ಗೆ ನಾನು ನೋಡಿರುವುದಿಲ್ಲ. ಯಾವ ಆಧಾರದ ಮೇರೆಗೆ ತಿಮ್ಮಪ್ಪ ಅವರು ಖದರಾಪುರದಲ್ಲಿ ವಾಸ ಇದ್ದರು ಎಂದು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಅವರು ವಾಸ ಇರುವುದನ್ನು ನಾನು ನೋಡಿರುತ್ತೇನೆಂದು ನುಡಿಯುತ್ತಾರೆ. ತಿಮ್ಮಪ್ಪ ಅವರು ಬದುಕಿರುವವರೆಗೆ ಮತದಾನವನ್ನು ಖದರಾಪುರದಲ್ಲಿ ಮಾಡುತ್ತಿದ್ದರು. ಯಾವುದೇ ವ್ಯಕ್ತಿ ಒಂದು ಗ್ರಾಮದಲ್ಲಿ ಮತದಾನ ಮಾಡಬೇಕಾದಲ್ಲಿದಲ್ಲಿ ಆತನ ಹೆಸರು ಮತದಾರರ ಪಟ್ಟಿಯಲ್ಲಿ ಇರಬೇಕು ಎಂದರೆ ಸರಿ. ತಿಮ್ಮಪ್ಪ ಅವರು ಖದರಾಪುರದಲ್ಲಿ ಮತದಾನ ಮಾಡುವುದನ್ನು ನಾನು ಖುದ್ದಾಗಿ ನೋಡಿರುವುದಿಲ್ಲ. ಖದರಾಪುರದ ಮತದಾರರ ಪಟ್ಟಿಯನ್ನು ನಾನು ಖುದ್ದಾಗಿ ನೋಡಿ ಪರಿಶೀಲನೆ ಮಾಡಿರುವುದಿಲ್ಲ.

ತಿಮ್ಮಪ್ಪ ಅವರು ಯಾವತ್ತು ಖದರಾಪುರದಲ್ಲಿ ವಾಸ ಇರಲಿಲ್ಲ ಅವರ ಸ್ವಂತ ಊರಾದ ತರಿಕೇರೆಯಲ್ಲಿ ವಾಸ ಇದ್ದರುಎಂದರೆ ಸರಿಯಲ್ಲ. ತಿಮ್ಮಪ್ಪ ಅವರು ಹೊಸಹಳ್ಳಿಯ ನ್ಯಾಯಬೆಲೆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ತಿಮ್ಮಪ್ಪ ಅವರು ಬದುಕಿದ್ದಾಗ ಯಾವ ಯಾವ ಜಮೀನುಗಳಲ್ಲಿ ಉಳುಮೆ ಮಾಡುತ್ತಿದ್ದರು ಎಂದು ನಾನು ನೋಡಿರುವುದಿಲ್ಲ ಟಿ. ಹೊಸಹಳ್ಳಿಗೂ ತರಿಕೇರೆ ಗ್ರಾಮಕ್ಕೂ 2 ಕೀ ಮೀ ಅಂತರ ಇದೆ. ನನಗೆ ಬುದ್ದಿ ಬಂದಾಗಿನಿಂದ ತರಿಕೇರೆ ಮತ್ತು ಟಿ. ಹೊಸಹಳ್ಳಿಯಲ್ಲಿ ಯಾರೂ ಯಾರಿಗೆ ಯಾವ ಯಾವ ಜಮೀನು ಬಂದಿರುತ್ತವೆಂದು ನಾನು ಖುದ್ದಾಗಿ ನೋಡಿರುವುದಿಲ್ಲ.

ತಿಮ್ಮಪ್ಪ ಅವರು ನನ್ನನ್ನು ಹೊರತು ಪಡಿಸಿ ಅವರ ತಮ್ಮಂದಿರಿಗೆ ಹಕ್ಕು ಖುಲಾಸೆ ಮಾಡಿದ್ದು ಕೆಲವೊಂದು ಆಸ್ತಿಗಳನ್ನು ಕ್ರಯ ಮಾಡಿಕೊಟ್ಟಿರುತ್ತಾರೆಂದು ಹೇಳುತ್ತಾರೆ. ತಿಮ್ಮಪ್ಪ ಅವರು ಬರೆದುಕೊಟ್ಟ ಕ್ರಯ ಪತ್ರದಲ್ಲಿ ಸರ್ವೆ ನಂ 41, 42, 28, 38 ವಿಭಾಗದಲ್ಲಿ ಅವರಿಗೆ ಬಂದಿರುತ್ತವೆಂದು ನಿಮ್ಮ ಕ್ರಯ ಪತ್ರದಲ್ಲಿ ಬರೆದಿದ್ದಾರೆ ಎಂದರೆ ಸಾಕ್ಷಿ ಅವರು ಒಟ್ಟು ಕುಟುಂಬದಲ್ಲಿದ್ದಾಗಲೇ ನಮಗೆ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆಂದು ನುಡಿಯುತ್ತಾರೆ.

ನನಗೆ ಆದ ಕ್ರಯ ಪತ್ರಕ್ಕೆ ಪ್ರತಿವಾದಿ 1 ಮತ್ತು 2 ಸಹ ಸಹಿ ಮಾಡಿರುತ್ತಾರೆ. ನನ್ನ ಕ್ರಯ ಪತ್ರವನ್ನು ನೋಡಿರುತ್ತೇನೆ ಮತ್ತು ಓದಿ ತಿಳಿದುಕೊಂಡಿರುತ್ತೇನೆ. ಸದರಿ ಕ್ರಯ ಪತ್ರದಲ್ಲಿ ತಿಮ್ಮಪ್ಪ ಅವರು ಸಹಿ ಮಾಡಿರುತ್ತಾರೆ ಮರಿಯಪ್ಪ ಮತ್ತು ಶ್ರೀನಿವಾಸ ಅವರು ಹೆಬ್ಬಟ್ಟಿನ ಗುರುತು ಹಾಕಿರುತ್ತಾರೆ ಎಂದು ಹೇಳುತ್ತಾರೆ. ನನಗೆ ಬರೆದುಕೊಟ್ಟ ಕ್ರಯ ಪತ್ರದಲ್ಲಿ ತಿಮ್ಮಪ್ಪ ಅವರು ಅವರ ಸಹಿಯ ಮುಂದೆ ಇನ್ ಶೇಲ್ ಆಗಿರುವುದನ್ನು ನೋಡಿರುವುದಿಲ್ಲ.

ನಾನು ನನ್ನ ಕ್ರಯ ಪತ್ರವನ್ನು ಈಗಾಗಲೇ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನಗೆ ಯಾವ ವರ್ಷ ಕ್ರಯ ಪತ್ರ ಆಗಿರುತ್ತದೆಂದು ನನಗೆ ಗೊತ್ತಿಲ್ಲ. ನಿ.ಡಿ 2 ಮತ್ತು 3 ರಂತೆ ಕ್ರಯ ಪತ್ರ ವಾದಾಗ ನನ್ನ 10 ವರ್ಷ ಆಗಿರಬಹುದೆಂದು ಹೇಳುತ್ತಾರೆ. ಆ ಸಮಯದಲ್ಲಿ ಮರಿಯಪ್ಪ ಮತ್ತು ಶ್ರೀನಿವಾಸ ಅವರಿಗೆ ಎಷ್ಟು ವರ್ಷ ವಯಸ್ಸಾಗಿತ್ತು ಎಂದು ನನಗೆ ಗೊತ್ತಿಲ್ಲ. ನಮಗೆ ಕ್ರಯ ಪತ್ರವಾದ ಸಮಯದಲ್ಲಿ ತಿಮ್ಮಪ್ಪ ಅವರ ತಂದೆ ಬದುಕಿದ್ದರು. ನನ್ನ ಪ್ರಕಾರ ಕ್ರಯ ಪತ್ರಕ್ಕೆ ಎಷ್ಟು ಜನ ಸಹಿ ಮಾಡಿದ್ದಾರೆ ಎಷ್ಟು ಜನ ಹೆಬ್ಬಟ್ಟಿನ ಗುರುತು ಹಾಕಿರುತ್ತಾರೆಂದು ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಆ ಸಮಯದಲ್ಲಿ ತಿಮ್ಮಪ್ಪ ಅವರು ಹೆಂಡತಿ ಯಾವ ಗ್ರಾಮದಲ್ಲಿ ವಾಸ ಇದ್ದರು ಎಂದು ಹೇಳುತ್ತಾರೆ. ತಿಮ್ಮಪ್ಪ ಅವರ ಹೆಂಡತಿ ಸದರಿ ಕ್ರಯ ಪತ್ರಕ್ಕೆ ಸಹಿ ಮಾಡಿರುವುದಿಲ್ಲ.

ತಿಮ್ಮಪ್ಪ ಅವರ ತಾಯಿ ಆ ಸಮಯದಲ್ಲಿ ಬದುಕಿದ್ದರು. ತಿಮ್ಮಪ್ಪ ಅವರಿಗೆ ಅದೊಂದೆ ಹೆಸರಿನಿಂದ ಕರೆಯುತ್ತಿದ್ದರು. ನಿ.ಡಿ 2 ನಲ್ಲಿರುವ ತಿಮ್ಮಯ್ಯ ಉರಫ ಪಾಪಯ್ಯ ಅವರ ಹೆಂಡತಿ ಮಾಂತಮ್ಮಾ ಎಂದರೆ ನನ್ನ ದೊಡ್ಡಮ್ಮಾ ಆಗಿರುತ್ತಾರೆ. ಮಾಂತಮ್ಮಾ ತಿಮ್ಮಪ್ಪ ಮರಿಯಪ್ಪ ಮತ್ತು ಶ್ರೀನಿವಾಸ ಅವರ ದೊಡ್ಡಮ್ಮಾ ಆಗಬೇಕು. ದೊಡ್ಡಮ್ಮಾ ಎಂದರೆ ತಿಮ್ಮಪ್ಪ ಅವರ ಅಣ್ಣನ ಹೆಂಡತಿ. ತಿಮ್ಮಪ್ಪ ಅವರ ದೊಡ್ಡಪ್ಪನ ಹೆಸರು ತಿಮ್ಮಯ್ಯ ಆಗಿರುತ್ತದೆ.

ನಮಗೆ ಆದ ಕ್ರಯ ಪತ್ರ 1960 ರಲ್ಲಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನಿ. ಡಿ 2 ರಲ್ಲಿ ನಮೂದು ಆಗಿರುವ ಆಸ್ತಿಗಳು ಬೆಟ್ಟಯ್ಯ ಮತ್ತು ಮಾಂತಮ್ಮಾ ಅವರ ಹೆಸರಿನಲ್ಲಿ ಜಂಟಿಯಾಗಿದ್ದವು. ನಾನು ಕಂದಾಯ ಇಲಾಖೆಗೆ ಈ ಬಗ್ಗೆ ಇರುವ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ಕ್ರಯ ಪತ್ರದ ಆಧಾರದ ಮೇರೆಗೆ ನಾನು ಹೇಳುತ್ತಿದ್ದೇನೆ. ಆ ಸಮಯದಲ್ಲಿ ತಿಮ್ಮಪ್ಪ ಉರಫ್ ಪಾಪಯ್ಯ ಮತ್ತು ಬೆಟ್ಟಯ್ಯ ಅವರು ವಿಭಾಗ ಆಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ನಿ.ಡಿ 2 ಕ್ಕೆ ಬೆಟ್ಟಯ್ಯ ಮತ್ತು ಮಾಂತಮ್ಮಾ ಅವರನ್ನು ಬಿಟ್ಟು ತಮ್ಮಪ್ಪ ಅವರ ಸಹೋದರರು ಸಹಿ ಮಾಡಿಲ್ಲವೆಂದರೆ ಸಾಕ್ಷಿ ಆಗ ಅವರು ಅಪ್ರಾಪ್ತ ವಯಸ್ಕರರಾಗಿದ್ದರು ಎಂದು ಹೇಳುತ್ತಾರೆ. ನಿ.ಡಿ 2 ರಲ್ಲಿ ತೋರಿಸಿರುವ ಆಸ್ತಿ ತಿಮ್ಮಯ್ಯ ಉರಫ್ ಪಾಪಯ್ಯ ಅವರಿಗೆ ಬಂದ ಆಸ್ತಿಯಾಗಿದ್ದು ತಿಮ್ಮಪ್ಪ ಮತ್ತು ಪ್ರತಿವಾದಿ 1 ಮತ್ತು 2 ಅವರಿಗೆ ಬಂದ ಆಸ್ತಿ ಆಗಿರುವುದಿಲ್ಲವೆಂದರೆ ಸರಿಯಲ್ಲ. ಆದ ಕಾರಣ ಸದರಿ ಆಸ್ತಿಯಲ್ಲಿ ತಿಮ್ಮಪ್ಪ ಮತ್ತು ಅವರ ಸಹೋದದರಿಗೆ ಮತ್ತು ಬೆಟ್ಟಯ್ಯ ಅವರಿಗೆ ಯಾವುದೇ ಹಕ್ಕು ಇರುವುದಿಲ್ಲವೆಂದರೆ ಬೆಟ್ಟಯ್ಯ ಅವರೆ ಬರೆದುಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ನಿ.ಡಿ2 ರಲ್ಲಿ ನಮೂದು ಇರುವ ಆಸ್ತಿ ಪ್ರತಿವಾದಿ 1 ಮತ್ತು 2 ಅವರಿಗೂ ಹಾಗೂ ತಿಮ್ಮಪ್ಪ ಅವರಿಗೆ ಯಾವುದೇ ಸಂಬಂದ ಇರುವುದಿಲ್ಲವೆಂದರೆ ಸರಿಯಲ್ಲ. ಆದ ಕಾರಣ ತಿಮ್ಮಪ್ಪ ಹಾಗೂ ಅವರ ಸಹೋದರರು ಹಾಗೂ ಬೆಟ್ಟಯ್ಯ ಸಹಿ ಮಾಡಿಲ್ಲವೆಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ

ಕುಣಿಗಲ್.